## ನಿರ್ಣಯ – 2

# ಮೌಲ್ಯಾಧಾರಿತ ರಾಜಕಾರಣಕ್ಕೆ ತಿಲಾಂಜಲಿ ಇಟ್ಟು ಜಾತಿ ಮತಗಳ ಹೆಸರಿನಲ್ಲಿ ದೇಶವನ್ನು ಛಿದ್ರಗೊಳಿಸಿ, ಭ್ರಷ್ಟಾಚಾರವನ್ನು ಬಿತ್ತಿ ಬೆಳಸಿದ ಕಾಂಗ್ರೆಸ್‌ನ ದೇಶ ವಿರೋಧಿ ಮಾನಸಿಕತೆಗೆ ಖಂಡನೆ

ರಾಜ್ಯದಲ್ಲಿ 2013 ರಿಂದ 2018ರ ವರೆಗೆ ಅಧಿಕಾರ ನಡೆಸಿದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಸಾವಿರಾರು ರೈತರ ಆತ್ಮಹತ್ಯೆಗೆ ಕಾರಣವಾಗಿ ರೈತರಿಗೆ ಸಾವಿನ ಭಾಗ್ಯವನ್ನು ತಂದುಕೊಟ್ಟ ಸರ್ಕಾರವಾಗಿತ್ತು. ಸಿದ್ದರಾಮಯ್ಯನವರ ಸರ್ಕಾರವು ವ್ಯಾಪಕ ಭ್ರಷ್ಟಾಚಾರ ನಡೆಸಿದ್ದಲ್ಲದೇ, ಇಡೀ ದೇಶಕ್ಕೆ ಮಾದರಿಯಾಗಿದ್ದ ಲೋಕಾಯುಕ್ತ ತನಿಖಾ ಸಂಸ್ಥೆಯನ್ನು ದುರ್ಬಲಗೊಳಿಸಿ, ತನ್ನ ಮೂಗಿನ ನೇರಕ್ಕೆ ಕಾರ್ಯನಿರ್ವಹಿಸಲು **"ಎಸಿಬಿ"** ಎಂಬ ತನಿಖಾ ಸಂಸ್ಥೆಯನ್ನು ಪ್ರಾರಂಭಿಸಿ, ರಾಜ್ಯದಲ್ಲಿ ಎಗ್ಗಿಲ್ಲದೇ ನಡೆದ ಭ್ರಷ್ಟಾಚಾರಕ್ಕೆ ಸಿದ್ದರಾಮಯ್ಯ ಮತ್ತು ಅವರ ಪಟಾಲಮ್ ಕಾರಣ. **ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳಿಗೆ ಖರೀದಿ ಮಾಡಿದ್ದ ಹಾಸಿಗೆ, ದಿಂಬು, ಚಂಬು, ತಟ್ಟೆ–ಲೋಟದಲ್ಲಿ ವ್ಯಾಪಕ ಭ್ರಷ್ಟಾಚಾರ. ಗಂಗಾ ಕಲ್ಯಾಣ ಯೋಜನೆಯಲ್ಲಿ ಪರಿಶಿಷ್ಟ ಜಾತಿಗೆ ನೀಡಬೇಕಿದ್ದ ಬೋರ್‌ವೆಲ್‌ಗಳ ಸೌಲಭ್ಯವನ್ನು ಬೋರ್‌ವೆಲ್ ಕೊರೆಸದೇ ಬಿಲ್ಲುಮಾಡಿಸಿ 100% ಅವ್ಯವಹಾರ ನಡೆಸಿದರು. ಇದರ ಬಗ್ಗೆ ತನಿಖೆಯನ್ನಾಗಲೀ ಅಥವಾ ಸದನ ಸಮಿತಿಯನ್ನಾಗಲೀ ನೇಮಿಸಲಿಲ್ಲ. ಸೋಲಾರ್ ಟೆಂಡರ್ ಹರಗರಣದಲ್ಲಿ ಅಂದಿನ ಇಂಧನ ಸಚಿವ ಇಂದಿನ ಕೆ.ಪಿ.ಸಿ.ಸಿ ರಾಜ್ಯ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ರವರು ಭಾಗಿಯಾಗಿದ್ದರು, ಅದರ ಬಗ್ಗೆ ಸೊಲ್ಲೆತ್ತದ ಅರ್ಕಾವತಿ ಡಿನೋಟಿಫಿಕೇಷನ್ ಪ್ರಕರಣಕ್ಕೆ "ರೀಡು" ಎಂಬ ವ್ಯಾಖ್ಯಾನವನ್ನು ನೀಡಿ ಸಾವಿರಾರು ಕೋಟಿ ಅವ್ಯವಹಾರಕ್ಕೆ ಕಾರಣೀಭೂತರಾದ ಸಿದ್ದರಾಮಯ್ಯ** ಇಂದು ಬಿಜೆಪಿ ಸರ್ಕಾರದ ವಿರುದ್ಧ ರಾಜ್ಯಕ್ಕೆ ಮತ್ತು ಸರ್ಕಾರಕ್ಕೆ ಅವಮಾನವಾಗುವ ರೀತಿಯಲ್ಲಿ ಯಾವುದೇ ದಾಖಲಾತಿ ಇಲ್ಲದೆ, ಯಾವುದೇ ಆಧಾರವೂ ಇಲ್ಲದೇ ರಸ್ತೆ–ರಸ್ತೆಗಳಲ್ಲಿ ಪೋಸ್ಟರ್ ಅಂಟಿಸಿ ಸರ್ಕಾರದ ವಿರುದ್ಧ ರಾಜ್ಯದ ಗೌರವಕ್ಕೆ ಧಕ್ಕೆ ತಂದಿದ್ದಾರೆ.

ಕೋವಿಡ್ ನಿರ್ವಹಣೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಕೈಗೊಂಡ ನಿರ್ಧಾರಗಳು ಹಾಗೂ ನಿರ್ವಹಣೆಯನ್ನು ಇಡೀ ದೇಶವೇ ಮೆಚ್ಚುವಂತೆ **"ಇಂಡಿಯಾ ಟುಡೇ" ಸಂಸ್ಥೆ ರಾಜ್ಯ ಸರ್ಕಾರಕ್ಕೆ ಪ್ರಶಂಸೆಯನ್ನು ನೀಡಿದೆ. ಆದರೆ ಕೋವಿಡ್ ನಿರ್ವಹಣೆ** ಬಗ್ಗೆ ಬಾಯಿಚಪಲಕ್ಕೆ ಅಪಪ್ರಚಾರ ಮಾಡಿದ ಸಿದ್ದರಾಮಯ್ಯ ಯಾವುದೇ ದಾಖಲೆಗಳೊಂದಿಗೆ ವಿಧಾನ ಸಭೆಯ ಅಧಿವೇಶನದಲ್ಲಿ ಚರ್ಚೆ ಮಾಡಲಿಲ್ಲ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಹಾಗೂ ಕೆ.ಪಿ.ಸಿ.ಸಿ ಅಧ್ಯಕ್ಷರ ಮುಸುಕಿನ ಗುದ್ದಾಟವನ್ನು ಮರೆಮಾಚಲು ಕರ್ನಾಟಕ **'ಕಾಂಟ್ರಾಕ್ಟ್ ಅಸೋಸಿಯೇಷನ್'** ಸಂಘವನ್ನು ದುರುಪಯೋಗ ಪಡಿಸಿಕೊಂಡಿತ್ತು. ಗುತ್ತಿಗೆದಾರರ ಸಂಘ ಮಾಡಿದ ಆಪಾಧನೆ ವಿರುದ್ಧ ಈಗಾಗಲೇ ರಾಜ್ಯ ಸರ್ಕಾರದ ಸಚಿವರೊಬ್ಬರು ಸಂಘದ ವಿರುದ್ಧ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

ಸರ್ಕಾರದ ಮೇಲೆ ಮಾಡಿದ ಭ್ರಷ್ಟಾಚಾರದ ಆರೋಪದ ಬಗ್ಗೆ ಗುತ್ತಿಗೆದಾರರ ಸಂಘವಾಗಲೀ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರಾಗಲೀ, ಕೆ.ಪಿ.ಸಿ.ಸಿ ಅಧ್ಯಕ್ಷರಾಗಲೀ ದಾಖಲೆ ಸಮೇತ ವಿಧಾನಸಭೆ ಅಧಿವೇಶನದಲ್ಲಾಗಲೀ ಅಥವಾ ತನಿಖಾ ಸಂಸ್ಥೆಗಳ ಎದುರಾಗಲೀ, ಸಾಕ್ಷಿಗಳ

ಸಮೇತ ದಾಖಲೆಗಳನ್ನು ಸಲ್ಲಿಸಲಿಲ್ಲ. ಲೋಕಾಯುಕ್ತ ಎಂಬ ಬಲಿಷ್ಠ ತನಿಖಾ ಸಂಸ್ಥೆಯ ಶಕ್ತಿಯನ್ನು ಕುಗ್ಗಿಸಿ, ನಿಮ್ಮ ಮೂಗಿನ ನೇರಕ್ಕೆ ನಡೆಸಿಕೊಳ್ಳಲು ನೀವೇ ರಚನೆ ಮಾಡಿದ ಎಸಿಬಿಯನ್ನ ಕರ್ನಾಟಕ ಘನ ನ್ಯಾಯಾಲಯವು ರದ್ದು ಮಾಡಿ, ಮತ್ತೆ ಲೋಕಾಯುಕ್ತಕ್ಕೆ ಬಲ ತುಂಬಿದೆ **ಈ ಹೈ–ಕೋರ್ಟ್ ತೀರ್ಪು ಭ್ರಷ್ಟಾಚಾರದ ಪಿತಾಮಹ, ಸಿದ್ದರಾಮಯ್ಯನವರಿಗೆ ಆದ ಛೀಮಾರಿ ಎಂದೇ ಭಾವಿಸಬೇಕು.**

## “ಹಾಸ್ಯಾಸ್ಪದವಾದ ಭಾರತ್ ಜೋಡೋ ಯಾತ್ರೆ”

ಸ್ವಾತಂತ್ರ್ಯ ಪೂರ್ವದಲ್ಲಿ ಅಖಂಡ ಭಾರತದ ಪರಿಕಲ್ಪನೆಯಲ್ಲಿ ಸ್ವಾತಂತ್ರ್ಯ ಚಳುವಳಿ ಮಾಡಿ ಲಕ್ಷಾಂತರ ಜನರ ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ನೆಹರುರವರ ಸ್ವಾರ್ಥ, ಕುಟಿಲತೆ ಮತ್ತು ಅಧಿಕಾರದ ಹಪಾಹಪಿಗಾಗಿ ಭಾರತವನ್ನು ಎರಡು ರಾಷ್ಟ್ರಗಳಾಗಿ ತುಂಡು ಮಾಡಿ ಪಾಕಿಸ್ತಾನವನ್ನು ಮುಸ್ಲಿಂರಾಷ್ಟ್ರ ಎಂದು ಘೋಷಿಸಿಕೊಂಡರು. ಭಾರತವನ್ನು ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಿ, ಭಾರತದ ಜಮ್ಮು ಮತ್ತು ಕಾಶ್ಮೀರದಲ್ಲಿ 370ನೇ ವಿಧಿಯನ್ನು ಜಾರಿಗೆ ತರುವ ಮೂಲಕ ಕಾಶ್ಮೀರಿ ಪಂಡಿತರನ್ನು ಬೀದಿಗೆ ಬೀಳುವಂತೆ ಮಾಡಿ ದೇಶದೊಳಗೆ ರಾಜ್ಯವನ್ನು ವಿಭಜಿಸುವ ಕೆಲಸ ಮಾಡಿದ ಕಾಂಗ್ರೆಸ್, ಅಲ್ಪಸಂಖ್ಯಾತರ ತುಷ್ಟೀಕರಣ ನೀತಿ ಜಾರಿಗೆ ತಂದು ಜಾತಿ/ಧರ್ಮಗಳ ನಡುವೆ ಸಮಾಜವನ್ನು ಒಡೆದು, ಕರ್ನಾಟಕದಲ್ಲಿ ಮತಾಂಧ “ಟಿಪ್ಪು ಜಯಂತಿ”ಯನ್ನು ಪ್ರಾರಂಭ ಮಾಡಿ ಭಯೋತ್ಪಾದಕ ಸಂಘಟನೆಗಳ ಪರನಿಂತ ಸಿದ್ದರಾಮಯ್ಯ, ಕೊಡಗಿನಲ್ಲಿ ಕುಟ್ಟಪ್ಪ ಎಂಬ ಕಾರ್ಯಕರ್ತನ ಕೊಲೆಗೆ ಕಾರಣೀಭೂತರಾದರು. ಕಾಂಗ್ರೆಸ್ ‘ಭಾರತ್ ಜೋಡೋ’ ಯಾತ್ರೆಯ ಸಂದರ್ಭದಲ್ಲಿ ದೇಶಾದ್ಯಂತ ಕೋವಿಡ್ ಸಂದರ್ಭದಲ್ಲಿ ನಿಧನ ಹೊಂದಿದ ಕುಟುಂಬದ ಮಗುವಿನ ಕೈಯಲ್ಲಿ ಮಾಧ್ಯಮದ ಮುಂದೆ ಹೇಳಿಕೆ ಕೊಡಿಸುವ ಕಾಂಗ್ರೆಸ್ ಮುಖಂಡರು, ಸಿದ್ದರಾಮಯ್ಯನವರ ಸರ್ಕಾರದ ಅವಧಿಯಲ್ಲಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡ ವಿಷಯದ ಕುರಿತು ಸದಾ ಸುಮ್ಮನಿರುವುದು ಅವರ ಆಷಾಡಭೂತಿತನಕ್ಕೆ ಸಾಕ್ಷಿ. ಬೆಳಗಾವಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಸುವರ್ಣಸೌಧದ ಮುಂಭಾಗ ವಿಠ್ಠಲ್ ಅರಭಾವಿ ಎಂಬ ರೈತ ಆತ್ಮಹತ್ಯೆ ಮಾಡಿಕೊಂಡ. ಮಂಡ್ಯದ ಪಾಂಡವಪುರದಲ್ಲಿ ಲಿಂಗೇಗೌಡ ಎಂಬ ರೈತ ತಾನು ಬೆಳೆದ ಕಬ್ಬಿಗೆ ನ್ಯಾಯಯುತ ಬೆಲೆ ಸಿಗಲಿಲ್ಲ ಎಂದು ತಾನು ಬೆಳೆದ ಕಬ್ಬಿನ ಬೆಳೆಗೆ ಬೆಂಕಿ ಇಟ್ಟು ತಾನು ಸಹ ಆತ್ಮಹತ್ಯೆ ಮಾಡಿಕೊಂಡ. ಆದರೆ ಭಾರತ್‌ಜೋಡೋ ಯಾತ್ರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಯಾವ ರೈತ ಕುಟುಂಬಕ್ಕೂ ಕಾಂಗ್ರೆಸ್ ನಾಯಕರು ಭೇಟಿ ನೀಡಿ ಧೈರ್ಯ ಹೇಳಲಿಲ್ಲ. ಇದು ಭಾರತ್‌ಜೋಡೋ ಯಾತ್ರೆಯೋ ಅಥವಾ ಕಾಂಗ್ರೆಸ್ ಓಡೋ ಯಾತ್ರೆಯೋ.

ಹಿಂದಿನ ಕಾಂಗ್ರೆಸ್ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಜಾತಿ ಮತಗಳ ನಡುವೆ ವೈಷಮ್ಯ ಮೂಡಿಸಿ, ಭ್ರಷ್ಟ ರಾಜಕಾರಣದ ಮೂಲಕ ರಾಜ್ಯದ ಅಭಿವೃದ್ಧಿಯನ್ನು ಕುಂಠಿತಗೊಳಿಸಿದ ಕಾಂಗ್ರೆಸ್‌ನ ಈ ಭ್ರಷ್ಟ ನೀತಿಯನ್ನು ಬಿಜೆಪಿ ರಾಜ್ಯ ಕಾರ್ಯಕಾರಿಣಿಯು ತೀವ್ರವಾಗಿ ಖಂಡಿಸುತ್ತದೆ.

*****